**ಸಾಕ್ಷಿಗೆ ದಿನಾಂಕಃ22-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ. KLR ವಕೀಲರಿಂದ ::**

ವಾದಿ ಹಾಗೂ ಮೃತ 1 ನೇ ಪ್ರತಿವಾದಿ ಅವರ ಕುಟುಂಬದ ಆಸ್ತಿಗಳನ್ನು 27.01.2012 ರಂದು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಅನ್ವಯ ಬಂದಿರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿಭಾಗ ಪತ್ರದ ಪಕ್ಷಗಾರರ ನಡುವೆ ಯಾವುದೇ ವಿವಾದ ಇರುವುದಿಲ್ಲ ಎಂದರೆ ಸರಿ. ವಿಭಾಗ ಆಗುವ ಪೂರ್ವದಲ್ಲಿ ಸರ್ವೇ ನಂಬರ್ 103/3, ಸರ್ವೇ ನಂಬರ್ 103/1 ಎಂದು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವಿಚಾರ ನನ್ನ ತಂದೆಗೆ ನುಡಿಯುತ್ತಾರೆ. ನನ್ನ ತಂದೆಯ ಆಸ್ತಿಗಳ ಉಸ್ತುವಾರಿಯನ್ನು ನಾನು ಮತ್ತು ಇತರೇ ಪ್ರತಿವಾದಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸರ್ವೇ ನಂಬರ್ 103/1 ವಿಭಾಗದ ನಂತರದಲ್ಲಿ 103/3 ಎಂದು ದುರಸ್ತು ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ವಿಸ್ತೀರ್ಣ 23 ವರೆ ಗುಂಟೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸ್ವತ್ತಿನ ಸರ್ವೇ ನಂಬರ್ 103/4 ಎಂದರೆ ಸರಿ. ನಮ್ಮ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದು ನನಗೆ ಈಗ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಸುಮಾರು 1 ಎಕರೆ 7 ಗುಂಟೆ ಜಮೀನು ಇರಬಹುದು. ನಾನು ಈಗ ಹೇಳುತ್ತಿರುವ ಜಾಗವನ್ನು ಹೊರತುಪಡಿಸಿ ನನಗೆ ಬೇರೆ ಸ್ವತ್ತಿನ ಮೇಲೆ ಹಕ್ಕು ಇರುವುದಿಲ್ಲ ಎಂದರೆ ಸರಿ. ವಾದಿಗಳಿಗೆ ವಿಭಾಗ ಪತ್ರದಲ್ಲಿ ಬಂದ ಆಸ್ತಿಗೆ ಅವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿ. ದಾವಾ ಎ ಆಸ್ತಿಯ ಪೂರ್ವಕ್ಕೆ ನಮ್ಮ ಸ್ವತ್ತು, ಪಶ್ಚಿಮಕ್ಕೆ ಕಲ್ಯಾಣಪ್ಪ ರವರ ಸ್ವತ್ತು, ಉತ್ತರಕ್ಕೆ ರಮೇಶಪ್ಪ ರವರ ಸ್ವತ್ತು ಮತ್ತು ದಕ್ಷಿಣಕ್ಕೆ ಆಂಜನೇಯ ರವರ ಸ್ವತ್ತು ಇರುತ್ತದೆ ಎಂದರೆ ಸರಿ.

ಪ್ರತಿವಾದಿಗಳಾದ 2 ರಿಂದ 4 ರಾದ ನಾವುಗಳು ಅಣ್ಣತಮ್ಮಂದಿರಾಗಿರುತ್ತೇವೆ. ಪ್ರತಿವಾದಿಗಳಾದ ನಮ್ಮ ನಡುವೆ ಯಾವುದೇ ಬಿನ್ನಾಭಿಪ್ರಾಯ ಇಲ್ಲ ಎಂದರೆ ಸರಿ. ಸರ್ವೇಯರ್ ರವರು ದಾವಾ ಆಸ್ತಿಯನ್ನು ಅಳತೆ ಮಾಡಿದ ಸಮಯದಲ್ಲಿ 3 ನೇ ಪ್ರತಿವಾದಿ ಸ್ಥಳದಲ್ಲಿ ಹಾಜರಿರುತ್ತಾರೆ ಎಂದರೆ ಸರಿಯಲ್ಲ. ಅಳತೆ ಪೂರ್ವದಲ್ಲಿ ನೋಟೀಸ್ ಅನ್ನು ಸರ್ವೇ ಇಲಾಖೆಯಿಂದ ಮೂರುನೇ ಪ್ರತಿವಾದಿ ಜಾರಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಎ ಸ್ವತ್ತಿನ ಪೂರ್ವ ಭಾಗದ ಮೂರುವರೆ ಗುಂಟೆ ಜಮೀನು ಅನ್ನು ಪ್ರತಿವಾದಿಗಳಾದ ನಾವುಗಳು

ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದಕಾರಣ ನಮ್ಮ ಆಸ್ತಿಯನ್ನು ಇವರೆಗೂ ನಾವು ಅಳತೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಬಿ ಸ್ವತ್ತಿನ ಮೇಲೆ ಪ್ರತಿವಾದಿಗಳಾದ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಹೂಡುವ ಪೂರ್ವದಲ್ಲಿ ನಮಗೆ ವಕೀಲರ ಮುಖಾಂತರ ನೋಟೀಸ್ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನೋಟೀಸ್ ಜಾರಿ ಮಾಡಿದ್ದರು ಇಲ್ಲ ಎಂದು ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಸೇರಿದ ಆಸ್ತಿಯನ್ನು ಬಿಟ್ಟು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಅಳತೆ ಆಗಿರುವುದಿಲ್ಲಎಂದು ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ರಮೇಶಪ್ಪ ರವರ ಜೊತೆ ಒಳ್ಳೆ ವಿಶ್ವಾಸದಲ್ಲಿ ಇದ್ದು ಕಲ್ಯಾಣಪ್ಪ ರವರ ಜೊತೆ ಒಳ್ಳೆ ವಿಶ್ವಾಸದಲ್ಲಿ ಇರುವುದಿಲ್ಲ. ವಾದಿರವರ ಸ್ವತ್ತನ್ನು ಅಳತೆ ಮಾಡುವ ಸಮಯದಲ್ಲಿ ರಮೇಶಪ್ಪ ಮತ್ತು ಕಲ್ಯಾಣಪ್ಪರವರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: